

ಚಿತ್ರ:ವಿಶ್ವನಾಥ ಸುವರ್ಣ

ಈ ದಾಖಲೆ ಕಾರ್ಯ ಒಂದು ಹಂತಕ್ಕೆ ಉಸಿರು ಬಿಡುವಂತಿದ್ದರೆ, ಹೆಚ್ಚಿನ ಮಕ್ಕಳಿರುವಲ್ಲಿ ಇದು ಶಿಕ್ಷಕರ ಉಸಿರು ನಿಲ್ಲಿಸುವಂತಿರುತ್ತದೆ.

ಯಾವುದನ್ನು ಮಾಡುವುದು, ಯಾವುದನ್ನು ಬಿಡುವುದು? ಇವುಗಳ ಮಧ್ಯೆ ವರ್ಗಾವಣೆ ಗೊಂದಲ, ನಿಯೋಜನೆ, ನಿಗದಿತ ಬೋಧನಾ ಅವಧಿಗಳ ಗೊಂದಲ, ಶಿಕ್ಷಕರ ಕೊರತೆ– ಹೀಗೆ ಇವೆಲ್ಲದರ ನಡುವೆ ಬೋಧನೆ ಮತ್ತು ಶಿಕ್ಷಕರನ್ನು ಭೂತಕನ್ನಡಿಯಲ್ಲಿ ಹುಡುಕಬೇಕಾಗಿದೆ.

ಖಾಸಗಿ ಶಾಲೆಗಳ ಸ್ಪರ್ಧೆ ಇಂದು ಪ್ರಬಲವಾಗಿದೆ. ಸರ್ಕಾರಿ ಶಾಲೆಗಳು ಯೋಗ್ಯ, ಅರ್ಹತೆಯುಳ್ಳ ಶಿಕ್ಷಕರಿದ್ದೂ ಅಸ್ತಿತ್ವ ಕಳೆದುಕೊಳ್ಳುತ್ತಿವೆ. 'ಸ್ಮಾರ್ಟ್ ಕ್ಲಾಸ್', ಡಿಜಿಟಲ್ ತಂತ್ರಜ್ಞಾನದಿಂದ ಪ್ರತಿಷ್ಠಿತ ಶಾಲೆಗಳು ಪೋಷಕರನ್ನು ತಮ್ಮತ್ತ ಸೆಳೆಯುತ್ತಿದ್ದರೆ, ಸರ್ಕಾರಿ ಶಾಲೆಗಳು ಕೇವಲ ಅರ್ಥವಿಲ್ಲದ ಕಡತ ನಿರ್ವಹಣೆಗಾಗಿ ಶಿಕ್ಷಕರನ್ನು ಬಳಸಿಕೊಳ್ಳುತ್ತಿದೆ ಎನಿಸುತ್ತಿದೆ. ಉತ್ತಮ ಜ್ಞಾನಾರ್ಜನೆ, ಸಂಪನ್ಮೂಲ ಶಿಕ್ಷಕರಿದ್ದರೂ ಅವರ ಜ್ಞಾನದ ಸದ್ಬಳಕೆಗೆ ಸೂಕ್ತ ಅವಕಾಶ ನೀಡುವಲ್ಲಿ, ವಾತಾವರಣ ಸೃಷ್ಟಿಸುವಲ್ಲಿ ಇಲಾಖೆ ಸೋಲುತ್ತಿದೆ. ಕೇವಲ ದಾಖಲೆಗಳಿಂದ ಗುಣಾತ್ಮಕ ಶಿಕ್ಷಣದತ್ತ ಸರ್ಕಾರಿ ಶಾಲೆಗಳು ಹೊರಳಲಾರವು, ಅದಕ್ಕಾಗಿ ಶಿಕ್ಷಕರ ಮನಸ್ಥಿತಿ, ಉತ್ಸಾಹ, ಕಾರ್ಯಭಾರ ಮುಖ್ಯವಾಗುತ್ತದೆ. ಅಧಿಕಾರಿಗಳು, ಚಿಂತಕರು, ಶಿಕ್ಷಣ ತಜ್ಞರು ಮತ್ತು ಇಲಾಖೆ ಈ ಬಗ್ಗೆ ಒಂದಷ್ಟು ಮನಸ್ಸು ಮಾಡಿ ಶಿಕ್ಷಕರ ಬೋಧನಾ ಸ್ವಾತಂತ್ರ್ಯಕ್ಕೆ ಭಂಗ ಬಾರದ ಯೋಜನೆಗಳನ್ನು ಸಿದ್ಧಪಡಿಸಿ ಅವರ ಉತ್ಸಾಹವನ್ನು ಇಮ್ಮಡಿಗೊಳಿಸಬೇಕಾಗಿದೆ.

ಶಿಕ್ಷಕರಾಗಿ ಕೆಲಸಕ್ಕೆ ಸೇರಿ ಯಾವುದೇ ಬಡ್ತಿ ಅವಕಾಶವಿಲ್ಲದೆ (ಮುಖ್ಯ ಶಿಕ್ಷಕರಾಗಿ ಕೆಲವು ಬಾರಿ ಸಾಧ್ಯ) ಶಿಕ್ಷಕರಾಗೇ ನಿವೃತ್ತಿಯಾಗುತ್ತಿರುವುದು ಶಿಕ್ಷಣ ಇಲಾಖೆಯಲ್ಲಿ ಮಾತ್ರ. ಅವರ ಉತ್ಸಾಹಕ್ಕೆ ಭಂಗ ತರುವ ಈ ಕಡತಗಳ ಕಾರ್ಯ ಶಿಕ್ಷಣ ಕ್ಷೇತ್ರದಲ್ಲಿ ಏನನ್ನಾದರೂ ಸಾಧಿಸಬೇಕೆಂದು ಬರುವ ಯುವ ಚಿಂತನೆಗಳಿಗೆ ಭ್ರಮನಿರಸನ ಉಂಟು ಮಾಡುವುದಂತೂ ಸತ್ಯ. ಬರೀ ಆದೇಶಗಳಿಂದ ಪರಿಮಾಣಾತ್ಮಕ ಗುರಿ ಮುಟ್ಟಬಹುದೇ ಹೊರತು ಪರಿಣಾಮಾತ್ಮಕ ಫಲಿತಾಂಶ ಸಾಧ್ಯವಿಲ್ಲ. ಇಲಾಖೆ ಈ ನಿಟ್ಟಿನಲ್ಲಿ ಯೋಚಿಸುವುದು ಒಳಿತು. ಅಂದ ಹಾಗೆ ನಾನು ಕೆಲಸಕ್ಕೆ ಸೇರಿದಾಗ ನನ್ನೊಳಗಿದ್ದ, ನಾನು ಹೆಮ್ಮೆ ಪಡುತ್ತಿದ್ದ ಶಿಕ್ಷಕಿ ಕಳೆದು ಹೋಗಿದ್ದಾಳೆ. ಹುಡುಕುವ ಪ್ರಯತ್ನದಲ್ಲಿದ್ದೇನೆ. ಪರಿಸ್ಥಿತಿ ಹೀಗೆ ಮುಂದುವರಿದರೆ ಬಹುಶಃ ಆಕೆ ಸಿಗಲಾರಳು ಎನ್ನುವ ನೋವಿದೆ. ■



ಸಿಗಂಧೂರು ಶ್ರೀದೇವಿ ಜ್ಯೋತಿಷ್ಯಂ



ಪ್ರಸಿದ್ಧ ಜ್ಯೋತಿಷ್ಯ ತಾಂತ್ರಿಕರು
ಶ್ರೀ ಚಂದ್ರಶೇಖರ್
ಕೇರಳ ಹಾಗೂ ಕೊಳ್ಳೆಗಾಲದ ಮಾಂತ್ರಿಕರು
99722 95444
ಭಾನಾಮತಿ ಸಿದ್ಧಿಸಾಧಕರು ಬೆಂಗಳೂರು ಮತ್ತು ಚೆನ್ನೈನಲ್ಲಿ ಅಪಾರ ಜನಮನ್ನಣೆ ಪಡೆದಿರುವ ಪ್ರಸಿದ್ಧ ಜ್ಯೋತಿಷ್ಯ ತಾಂತ್ರಿಕರು ಶ್ರೀ ಚಂದ್ರಶೇಖರ್‌ರವರು ಸಿಗಂಧೂರು ಚೌಡೇಶ್ವರಿ ದೇವಿಯ ಉಪಾಸಕರು ನಿಮ್ಮೆಲ್ಲ ಸಮಸ್ಯೆಗಳಿಗೆ ಶೀಘ್ರ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಕ್ರಿಶ್ಚಿಯನ್ ಹಾಗು ಮುಸ್ಲಿಂ ಬಾಂಧವರಿಗೆ ಯಂತ್ರ ಮಂತ್ರಗಳ ಸಹಾಯವಿಲ್ಲದೆ ಕಾರ್ಯಸಿದ್ಧಿ ಮಾಡಿಕೊಡಲಾಗುವುದು
ಸ್ತ್ರೀಯರಿಗೆ ವಿಶೇಷ ಪರಿಹಾರ
ಮದುವೆ ವಿಳಂಬ, ಪ್ರೀತಿಯಲ್ಲಿ ನಂಬಿ ಮೋಸ, ಇಷ್ಟಪಟ್ಟವರಿಂದ ಅನುಕೂಲ ಮಾಡಿಕೊಳ್ಳಲು, ಗಂಡ ಹೆಂಡತಿ ಕಲಹ, ವ್ಯಾಪಾರಾಭಿವೃದ್ಧಿ, ಸಾಲಗಾರರ ಕಿರಿಕಿರಿ, ಸಂತಾನ ಸಮಸ್ಯೆ, ಆರೋಗ್ಯ, ಲೈಂಗಿಕ ಸಮಸ್ಯೆ, ಕುಟುಂಬ ಕಲಹ, ಮಾಟಮಂತ್ರ ನಿವಾರಣೆ, ಸ್ತ್ರೀಯರ personal problems, ಇಷ್ಟಪಟ್ಟವರು ನಿಮ್ಮಂತಾಗಲು, ಹಣಕಾಸು, ಮಕ್ಕಳು ಪ್ರೀತಿ ಪ್ರೇಮದಲ್ಲಿ ಬಿದ್ದು ತಂದೆ ತಾಯಿಗಳ ಮಾತು ಕೇಳದಿದ್ದಲ್ಲಿ
ಸ್ತ್ರೀ ಪುರುಷರ ಕಠಿಣ ಸಮಸ್ಯೆಗಳನ್ನು ಗುಪ್ತವಾಗಿರಿಸಿ ಅತೀ ಶೀಘ್ರದಲ್ಲಿ ಪರಿಹಾರ ಮಾಡಿಕೊಡಲಾಗುವುದು
ಖಾಯಂ ವಿಳಾಸ:
ಸಿಗಂಧೂರು ಶ್ರೀದೇವಿ ಜ್ಯೋತಿಷ್ಯಂ, ತಾಂತ್ರಿಕರು ಶ್ರೀ ಚಂದ್ರಶೇಖರ್
U.N ಆರ್ಕೆಡ್, ಇಂದ್ರಪ್ರಸ್ಥ ಹೋಟೆಲ್ ಹತ್ತಿರ, ವಿಜಯನಗರ ಮುಖ್ಯ ಬಸ್ ನಿಲ್ದಾಣದ ಹಿಂಭಾಗ,
ವಿಜಯನಗರ, ಬೆಂಗಳೂರು